ಹಕೀಕತ್ ಅರ್ಥವಾಗದೆ ಪ್ರಯಾಣಿಕರಲ್ಲಿ ಪರಸ್ಪರ ಗೋಳುಗುದ್ದಾಟ ಶುರುವಾಯಿತು. ಶಿವಮೊಗ್ಗದ ಗಲಭೆ ವಿಚಾರವಾಗಿ ಬೇಕಾದ್ದು ಬೇಡವಾದ್ದನ್ನೆಲ್ಲ ಯೋಚಿಸುತ್ತ ಎಚ್ಚರವಾಗೆ ಇದ್ದ ರೋಹಿತ್ ಇತರ ಪ್ರಯಾಣಿಕರಂತೆ ಗಾಬರಿ ಆಗಲಿಲ್ಲ, ಬೇಡ್ತಿ ಏರಿನಲ್ಲಿ ಆದಂತೆ ಈಗ ಮತ್ತೊಂದು ಟೈರು ಠುಸ್ ಆಗಿರಬೇಕು ಎಂದುಕೊಂಡ.

ರೋಹಿತ್ ನೆಟ್ಟಗೆ ಕುಳಿತು ಕಣ್ಣರಳಿಸಿ ನೋಡಿದ. ಬಸ್ಸಿಗೆ ಅಡ್ಡವಾಗಿ ಮೂರು ವಾಹನಗಳು ನಿಂತಿದ್ದವು. ವೇಗವಾಗಿ ಚಲಿಸುತ್ತಿದ್ದ ಬಸ್‌ನ ಹಿಂದಿನಿಂದ ಬಂದು ಓವರ್‌ಟೇಕ್ ಮಾಡಿ ಅಡ್ಡ ನಿಂತವೇಕೆ ಎನ್ನುವುದು ಅರ್ಥವಾಗದೆ ನೋಡಿದ. ನಾಲ್ಕೈದು ಜನ ಅತ್ಯಾಧುನಿಕ ಗನ್‌ಗಳೊಂದಿಗೆ ವಾಹನಗಳಿಂದ ಜಿಗಿದ ರೀತಿ ಗಾಬರಿ ಹುಟ್ಟಿಸಿತು. ದರೋಡೆಕೋರರು ಇವರಾಗಿರಬಹುದೆ? ಒಂದೇ ಕ್ಷಣದಲ್ಲಿ ಅನುಮಾನ ಹಾರಿಹೋಯಿತು. ತಾನು ತಿಳಿದಂತೆ ದರೋಡೆಗೆ ಬರುವವರು ಗುರುತು ಸಿಗದಂತೆ ಟವೆಲ್ ಸುತ್ತಿಕೊಂಡೋ ಮಂಕಿ ಕ್ಯಾಪ್ ಧರಿಸಿಯೋ ಮುಖ ಮರೆಮಾಚಿಕೊಂಡಿರುತ್ತಾರೆ. ಚಿಗುರು ಮೀಸೆಯ ನುಣ್ಣಗೆ ಶೇವ್ ಮಾಡಿದ ಫಳಫಳ ಹೊಳೆಯುವ ಮುಖಗಳು ಇವು. ಖಂಡಿತವಾಗಿಯೂ ಇವರು ಅವರಂತೂ ಅಲ್ಲವೇ ಅಲ್ಲ. ಹೆಸರಿಗಷ್ಟೇ ಕಾಡು ಪ್ರದೇಶ ಎನಿಸಿರುವ ಮಲೆನಾಡಿನ ಈ ಮೂಲೆಗೆ ಭಯೋತ್ಪಾದಕರು ಬರಲಾರರು. ಶೃಂಗೇರಿ ಕೊಪ್ಪ ಸುತ್ತಮುತ್ತ ನಕ್ಸಲೀಯರ ಚಟುವಟಿಕೆ ಕುರಿತು ಪತ್ರಿಕೆಗಳಲ್ಲಿ ಓದಿದ್ದ ರಾಹುಲ್ ಯೋಚನೆ ಅತ್ತ ತಿರುಗಿತು. ಅವರೂ ಅಷ್ಟೆ ಮುಖ ಮರೆಸಿಕೊಂಡಿರುತ್ತಾರೆ ಎಂದು ಓದಿದ್ದು ನೆನಪಾಯಿತು. ಅವರ್‍ಯಾರೂ ಅಲ್ಲವಾದರೆ ಇವರು ಯಾರಾಗಿರಬಹುದು; ಯಾಕಾಗಿ ಬಸ್ಸನ್ನು ಹೀಗೆ ಏಕಾಏಕಿ ಅಡ್ಡಗಟ್ಟಿರಬಹುದು? ಪುಂಖಾನುಪುಂಖ ಬರುತ್ತಿದ್ದ ಯೋಚನೆಗಳು ಆ ಜನರು ಬಸ್ ಬಾಗಿಲು ತೆಗೆಸಿ ಒಳಕ್ಕೇರಿ ಲೈಟ್ ಹಾಕುವಂತೆ ಡ್ರೈವರ್‌ಗೆ ಗನ್ ಹಿಡಿದು ತಾಕೀತು ಮಾಡಿದಾಗ ತುಂಡರಿಸಿದವು. ಎಲ್ಲರ ಕೈಯಲ್ಲೂ ಪ್ರಖರ ಬೆಳಕು ಚೆಲ್ಲಿ ಕಣ್ಣು ಕೋರೈಸುವ ಬ್ಯಾಟರಿ.

ದಾಂಡೇಲಿ ಬಸ್ಸೇ ಹಾಗೆ, ದಿನ ತುಂಬಿದ ಬಸುರಿಯಂತೆ ಸದಾ ಫುಲ್. ಅಂದೂ ಅಷ್ಟೆ. ಪ್ರಯಾಣಿಕರಲ್ಲಿ ಯಾರೂ ತಕರಾರು ಮಾಡದೆ; ಕೂತಲ್ಲೇ ಕುಳಿತು ಹೇಳಿದಂತೆ ಕೇಳತಕ್ಕದ್ದೆಂದೂ, ಭಯೋತ್ಪಾದಕ ನಿಗ್ರಹ ದಳದವರು ತಾವೆಂದೂ ಒಳಬಂದವರು ಹೇಳಿಕೊಂಡರು. ಈ ಬಸ್ಸಿನಲ್ಲಿ ಇಷ್ಟು ಹೊತ್ತಿನಲ್ಲಿ ಇವರಿಗೇನು ಕೆಲಸ ಎಂದು ಇತರ ಅನೇಕರಂತೆ ರೋಹಿತ್ ಕೂಡಾ ತಲೆ ಕೆರೆದುಕೊಂಡ. ಯಾರೋ ಭಯೋತ್ಪಾದಕ ಬಸ್ಸಿನಲ್ಲಿ ಪ್ರಯಾಣಿಸುತ್ತಿರುವ ಸುಳಿವು ಇವರಿಗೆ ಸಿಕ್ಕಿದೆ, ಆತನನ್ನು ವಶಕ್ಕೆ ಪಡೆದ ಬಳಿಕ ಬಸ್ಸು ಮುಂದಕ್ಕೆ ಹೋಗುತ್ತದೆ. ಯಾರಿರಬಹುದು ಆತ ಎಂಬ ಚಿಕಿತ್ಸಕ ಕುತೂಹಲದಲ್ಲಿ ಮೈಯೆಲ್ಲ ಕಣ್ಣಾದ.

ಬಂದವರು ಒಬ್ಬೊಬ್ಬರನ್ನಾಗಿ ತಪಾಸಣೆ ನಡೆಸಿದರು. ದಳದಲ್ಲಿ ಮಹಿಳಾ ಸಿಬ್ಬಂದಿಯೂ ಇದ್ದು ಮಹಿಳಾ ಪ್ರಯಾಣಿಕರನ್ನು ಮುಜುಗರಕ್ಕೆ ಒಳಗಾಗದಂತೆ ತಪಾಸಣೆ ನಡೆಸಿದರು. ಎಲ್ಲ 40-45 ಪ್ರಯಾಣಿಕರ ತಪಾಸಣೆ ಒಂದು ಕಡೆಯಿಂದ ನಡೆಯುತ್ತಿದ್ದರೆ ಮತ್ತೆ ಕೆಲವರು ಲಗ್ಗೇಜುಗಳ ಶೋಧ ನಡೆಸಿದ್ದರು. ಇದು ಯಾರ ಚೀಲ, ಈ ಬ್ಯಾಗು ಯಾರದು, ಈ ಬ್ಯಾಕ್‌ಪ್ಯಾಕ್ ಯಾರಿಗೆ ಸೇರಿದ್ದು ಎಂದು ಪ್ರತಿಯೊಂದರ ವಿವರವನ್ನೂ ಪಡೆಯುತ್ತ ಅದರೊಳಕ್ಕೆ ಟಾರ್ಚ್ ಹಿಡಿದು ಶೋಧಿಸುತ್ತ ಬಂದ ಅವರು ಬ್ಯಾಕ್‌ಪ್ಯಾಕ್ ಒಂದನ್ನು ಕೈಗೆ ತೆಗೆದು ಕೊಳ್ಳುತ್ತಿದ್ದಂತೆಯೇ ತನ್ನದು ಅದೆಂದು ರೋಹಿತ್ ಸ್ವತಃ ಹೇಳಿಕೊಂಡ. ಬ್ರಷ್, ಟೂತ್ ಪೇಸ್ಟ್, ಬಾಚಣಿಗೆ, ಸೋಪು, ಶೇವಿಂಗ್ ಕಿಟ್, ಟವೆಲ್, ಒಂದು ದಿನಕ್ಕಾಗುವಷ್ಟು ಬಟ್ಟೆ ಬರೆ, ಮೊಬೈಲ್ ಚಾರ್ಜರನ್ನು ಇಟ್ಟುಕೊಂಡು ಹೊರಟಿದ್ದ. ತನ್ನದೆಂದು ರೋಹಿತ್ ಹೇಳಿಕೊಂಡ ಬ್ಯಾಕ್‌ಪ್ಯಾಕ್‌ನ ಜಿಪ್ ಎಳೆದು ಅದರೊಳಗೆ ಬ್ಯಾಟರಿ ಬೆಳಕು ಚೆಲ್ಲಿದಾತನ ತೀಕ್ಷ್ಣ ಕಣ್ಣುಗಳು ಅಷ್ಟಗಲ ಅರಳಿದವು. ಹುಡುಕುತ್ತಿದ್ದ ನಿಧಿ ಕೈಗೆ ಬಂದು ಬಿದ್ದ ಭಾವ ಆ ನೋಟದಲ್ಲಿ ವ್ಯಕ್ತವಾಯಿತು. 'ಸರ್ಜೀ...' ಎಂದು ತನ್ನ ಲೀಡರ್‌ಗೆ ಏನೋ ಸಂಜ್ಞೆ ಮಾಡಿದ. ಗ್ಯಾಂಗ್‌ನ ಎಲ್ಲರ ಕೈಲಿದ್ದ ಎಕೆ-47ಗಳೂ ರೋಹಿತ್‌ನತ್ತ ಮುಖ ಮಾಡಿದವು. ಯಾರಾತ ಯಾರಾತ ಎಂದುಕೊಳ್ಳುತ್ತಿದ್ದ ರೋಹಿತ್‌ಗೆ ತಾನೇ ಆ 'ಯಾರಾತ' ಆಗಿದ್ದು ನೋಡಿ ಸಿಗ್ಗಾಗಿ ಜಂಘಾಬಲ ಉಡುಗಿತು. ಬ್ಯಾಗು ತನ್ನದೆಂದು ರೋಹಿತ್ ಮೊದಲೇ ಹೇಳಿದ್ದರಿಂದ ಹೆಚ್ಚಿನ ಮಾಹಿತಿ ದಳದವರಿಗೆ ಬೇಕಾಗಿರಲಿಲ್ಲ. ಜಬರ್ದಸ್ತಿನ ಗಡಸು ಧ್ವನಿಯಲ್ಲಿ 'ಕೆಳಕ್ಕೆ ಇಳಿ' ಎಂದು ಒಬ್ಬ ಹಿಂದಿಯಲ್ಲಿ ಹೇಳುವ ಕ್ಷಣಕ್ಕೆ ಕಾಯುತ್ತಿದ್ದವರಂತೆ ಇನ್ನಿಬ್ಬರು ರೋಹಿತ್ನ ತೋಳು